ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ. ಆರ್. ಮೋಹನ್

ಛಾಯಾಚಿತ್ರ ೮೪

ತಮ್ಮ ಸ್ನೇಹಿತರ ಒತ್ತಾಯಕ್ಕೆ ಮಣಿದು, ಸ್ವಾಮಿ ವಿವೇಕಾನಂದರು ಜನವರಿಯಲ್ಲಿ ಪಸಡೇನಾ (Pasadena) ಎಂಬ ಊರಿನ ಬಳಿಯಿರುವ ಮೌಂಟ್ ಲೋವ್ (Mount Lowe) ಎಂಬ ಗಿರಿಪ್ರದೇಶಕ್ಕೆ ಪ್ರವಾಸ ಹೋದರು. ದಾರಿಯಲ್ಲಿ ಒಂದು ರಾತ್ರಿಯನ್ನು ಹೊಟೆಲ್ ಒಂದರಲ್ಲಿ ಕಳೆದರು. ಮರುದಿನ ಸುಂದರ ದೃಶ್ಯಗಳನ್ನು ಒಳಗೊಂಡ ರೈಲುಮಾರ್ಗದಲ್ಲಿ ಪ್ರಯಾಣವನ್ನು ಮುಂದುವರಿಸಿದರು. ಬಳಿಕ, ಗ್ರೇಟ್ ಕೇಬಲ್ ಇನ್‌ಕ್ಲೈನ್ (Great Cable Incline) ಎಂಬ ಹೆಸರಿನ ಟ್ರಾಲಿಯ ಮೂಲಕ ಬೆಟ್ಟದ ತುದಿಯಲ್ಲಿರುವ ಇಕೋ ಮೌಂಟನ್ ಹೌಸ್ (Echo Mountain House) ಅನ್ನು ತಲುಪಿದರು. ಅಂದು ೧೯೦೦ರ ಜನವರಿ ೧೩ ನೇ ದಿನ, ಶನಿವಾರವಾಗಿತ್ತು.

ಟ್ರಾಲಿಯಲ್ಲಿ ಸ್ವಾಮೀಜಿಯವರ ಜೊತೆ ಇದ್ದವರ ಹೆಸರುಗಳು ಹೀಗಿವೆ : ಬಾಮ್‌ಗಾರ್ಟ್ ದಂಪತಿಗಳು, ಮಿಸ್ ಮೆಕ್‌ಲೌಡ್ ಮತ್ತು ಮಿಸೆಸ್ ಲೆಗೆಟ್. ಅಂದು ರಾತ್ರಿ ಅವರು ಅಲ್ಲಿನ ಖಗೋಲ ವೀಕ್ಷಣಾಲಯಕ್ಕೆ ಭೇಟಿ ಕೊಟ್ಟು, ದೂರದರ್ಶಕದ ಮೂಲಕ ನಕ್ಷತ್ರವೀಕ್ಷಣೆಯನ್ನು ಮಾಡಿ, ಆನಂದಿಸಿದರು. ಮರುದಿನ ಬೆಳಗ್ಗೆ ಎಲ್ಲರೂ ಪಸಡೇನಾ ನಗರಕ್ಕೆ ಹಿಂತಿರುಗಿದರು.

ಛಾಯಾಚಿತ್ರ ೮೪



ಛಾಯಾಚಿತ್ರ ೮೫

ಛಾಯಾಚಿತ್ರ ೮೫

೧೯೦೦ರ ಜನವರಿ ೧೫ ರಂದು ಸ್ವಾಮೀಜಿ ಲಾಸ್ ಏಂಜಲಿಸ್ ನಗರವನ್ನು ಬಿಟ್ಟು, ದಕ್ಷಿಣ ಪಸಡೆನಾ ನಗರಕ್ಕೆ ತೆರಳಿದರು. ಮೂವರು ಮೀಡ್ ಸಹೋದರಿಯರು ಅವರ ಆತಿಥೇಯರಾಗಿದ್ದರು. ಅವರುಗಳ ಹೆಸರು ಹೀಗಿದೆ: ಮಿಸೆಸ್ ಕ್ಯಾರಿ ಮೀಡ್ ವೈಕಾಫ್, ಮಿಸೆಸ್ ಆ್ಯಲಿಸ್ ಮೀಡ್ ಹ್ಯಾನ್ಸ್‌ಬ್ರೋ ಮತ್ತು ಮಿಸ್ ಹೆಲೆನ್ ಮೀಡ್.

ಸ್ವಾಮಿ ವಿವೇಕಾನಂದರು ಮೀಡ್ ಸಹೋದರಿಯರ ಬಂಗಲೆಯ ಎದುರು ಮೂಲೆಯಲ್ಲಿ ನಿಂತಿರುವಾಗ ಈ ಛಾಯಾ ಚಿತ್ರವನ್ನು ಸೆರೆಹಿಡಿಯಲಾಯಿತು. ಇದರ ಹಿಂಭಾಗದಲ್ಲಿ ಇರುವ ದೊಡ್ಡ ರೋಸ್ ಮರ ಹಾಗೂ ಬಂಗಲೆಯ ಮೊಗಸಾಲೆಯಿಂದ ಶ್ರೀಮತಿ ಕ್ಯಾರಿ ಮೀಡ್ ವೈಕಾಫ್ ಇಣುಕಿ ನೋಡುತ್ತಿರುವುದನ್ನೂ ಚಿತ್ರದಲ್ಲಿ ಗಮನಿಸಬಹುದು.

ಕಾಲಾಂತರದಲ್ಲಿ ಈ ಬಂಗಲೆಯನ್ನು ಒಬ್ಬ ಭಕ್ತರು ಖರೀದಿಸಿದರು. ಹಾಗೂ ಅದನ್ನು ಹಾಲಿವುಡ್‌ನಲ್ಲಿ ಇರುವ ವೇದಾಂತ ಸೊಸೈಟಿ ಆಫ್ ಸದರನ್ ಕ್ಯಾಲಿಫೋರ್ನಿಯಾ ಸಂಸ್ಥೆಗೆ ದಾನಮಾಡಿದರು. ೧೯೮೯ರಲ್ಲಿ ಇದನ್ನು 'ವಿವೇಕಾನಂದ ಹೌಸ್' ಎಂದು ಚಾರಿತ್ರಿಕ ಸ್ಥಾನವನ್ನಾಗಿ ಘೋಷಣೆ ಮಾಡಲಾಗಿದೆ.